**PRAJAVANI**

**Date:** February 9, 2015 **Page No.** 02

**Edition:** Mysore **Language: Kannada**

‘ಅಭಿವ್ಯಕ್ತಿ ಸ್ವಾತಂತ್ರ್ಯ’ ಕುರಿತ ವೈ. ಭಗವಾನ್ ಸ್ಮಾರಕ ಕಾರ್ಯಕ್ರಮ

# ಚರ್ಚಾಸ್ಪರ್ಧೆ: ವೆಂಕಟರಾಮ್ ಪ್ರಥಮ

ಪ್ರಜಾವಾಣಿ ವಾರ್ತೆ

ಮೈಸೂರು: ಬನ್ನಿಮಂಟಪದಲ್ಲಿರುವ ಸಂತ ಫಿಲೋಮಿನಾ ಕಾಲೇಜಿನ ವಿದ್ಯಾರ್ಥಿ ವೆಂಕಟರಾಮ್ ಹರೀಶ್ ಬೆಳವಾಡಿ ಅವರು ಭಾನುವಾರ ಧರ್ಮಸ್ಥಳ ಮಂಜುನಾಥೇಶ್ವರ ವ್ಯವಸ್ಥಾಪನೆ ಮತ್ತು ನಿರ್ವಹಣಾ ಮಹಾ ವಿದ್ಯಾಲಯ (ಎಸ್‌ಡಿಎಂಐಎಂಡಿ) ಮತ್ತು ರೋಟರಿ ಮಿಡ್‌ಟೌನ್ ಆಯೋಜಿಸಿದ್ದ ‘ಅಭಿವ್ಯಕ್ತಿ ಸ್ವಾತಂತ್ರ್ಯ’ ಕುರಿತ ವೈ. ಭಗವಾನ್ ಸ್ಮಾರಕ ಇಂಗ್ಲಿಷ್ ಚರ್ಚಾಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿದರು.

ಸ್ಪರ್ಧೆಯಲ್ಲಿ ಬೆಂಗಳೂರಿನ ಕ್ರೈಸ್ಟ್ ವಿವಿಯ ಕಾನೂನು ಶಾಲೆಯ ವಿದ್ಯಾರ್ಥಿ ವೈ ಆದಿತ್ಯ ಮತ್ತು ಅದೇ ಕಾಲೇಜಿನ ರಾಹುಲ್ ರಾಮನ್ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನವನ್ನು ಪಡೆದರು.

ಸ್ಪರ್ಧೆ ಉದ್ಘಾಟಿಸಿದ ಇನ್ಫೋಸಿಸ್ ಜೀವನಶೈಲಿ ತರಬೇತುದಾರರಾದ ಛಾಯಾ ಶ್ರೀವತ್ಸ, ‘ಸಭಾಕಂಪನ ಮತ್ತು ಸಾವು ಬಹುತೇಕ ಮನುಷ್ಯರನ್ನು ಕಾಡುವ ಎರಡು ಮುಖ್ಯ ಭೀತಿಗಳು. ಸಭಾಕಂಪನ ಭೀತಿಯನ್ನು ಹೋಗಲಾಡಿಸಲು ಚರ್ಚಾಸ್ಪರ್ಧೆಗಳು ನೆರವಾಗುತ್ತವೆ’ ಎಂದು ಅವರು ಹೇಳಿದರು.

‘ವೇದಿಕೆಯಲ್ಲಿ ನಿಂತು ಮಾತನಾಡುವುದು ಒಂದು ಕಲೆ. ಜನರ ಮುಂದೆ ನಿಂತು ಮಾತನಾಡಲು ಬಹಳಷ್ಟು ಜನರು ಭಯಪಡುತ್ತಾರೆ. ಈ ಭೀತಿಯು ಬಹುತೇಕ ಎಲ್ಲರ ಜೀವನದಲ್ಲಿಯೂ ಕಾಣುತ್ತದೆ. ಸಾವಿನ ಭೀತಿ ಬಿಟ್ಟರೆ, ಜನರು ಅತಿ ಹೆಚ್ಚು ಭಯ ಪಡುವುದು ವೇದಿಕೆಯ ಮೇಲೆ ನಿಂತು ಮಾತನಾಡಲು ಭಯ ಪಡುವುದು ಹೆಚ್ಚು’ ಎಂದರು.

‘ಚರ್ಚಾಪಟುಗಳು ಆತ್ಮ ವಿಶ್ವಾಸದೊಂದಿಗೆ ಮಾತನಾಡಬೇಕು. ಒಂದು ವೇಳೆ ಮಾತನಾಡುವಾಗ ಭಯಪಟ್ಟು ಅರ್ಧಕ್ಕೆ ನಿಲ್ಲಿಸಬೇಕಾದ ಪ್ರಮೇಯ ಬಂದರೂ ಸೌಜನ್ಯಯುತವಾಗಿ ಮತ್ತು ಅಷ್ಟೇ ಆತ್ಮವಿಶ್ವಾಸಪೂರ್ವಕವಾಗಿ ವಂದಿಸಿ ಮರಳಬೇಕು. ಇದು ಒಬ್ಬ ಉತ್ತಮ ಚರ್ಚಾಪಟುವಿನ ಮುಖ್ಯ ಗುಣ. ಸೋಲು, ಗೆಲುವುಗಳು ಒಂದೆಡೆಯಾದರೆ, ಇಂತಹ ಸ್ಪರ್ಧೆಗಳಲ್ಲಿ ಭಾಗವಹಿಸುವುದರಿಂದ ಸಂವಹನ ಕಲೆ ವೃದ್ಧಿಯಾಗುತ್ತದೆ. ವ್ಯಕ್ತಿತ್ವ ವಿಕಸನವಾಗುತ್ತದೆ. ಸ್ಪರ್ಧಾತ್ಮಕ ಯುಗದಲ್ಲಿ ಇದು ಬಹಳ ಮುಖ್ಯ’ ಎಂದು ಸಲಹೆ ನೀಡಿದರು.

‘ನಾನು ಮಹಾರಾಣಿ ಕಾಲೇಜಿನಲ್ಲಿ 1962ರಿಂದ ಅಧ್ಯಯನ ಮಾಡಿದೆ. ನಂತರದ ವರ್ಷಗಳಲ್ಲಿ ಇಂಗ್ಲಿಷ್ ಲಿಟರೇಚರ್ ವಿಭಾಗ ಆರಂಭವಾಯಿತು. ಪ್ರೊ.ವೈ. ಭಗವಾನ್ ಅವರಲ್ಲಿ ನಾವು ಕಲಿತಿದ್ದೇವೆ. ಅವರ ಪ್ರಭಾವ ನಮ್ಮ ಮೇಲೆ ಸಾಕಷ್ಟು ಪರಿಣಾಮ ಬೀರಿತ್ತು’ ಎಂದು ಸ್ಮರಿಸಿದರು.

ಈ ಸಂದರ್ಭದಲ್ಲಿ ರೋಟರಿ ಮಿಡ್‌ಟೌನ್ ಕಾರ್ಯದರ್ಶಿ ಮೋಹನ್, ಗೋವಿಂದ ಶರ್ಮಾ, ಆರ್. ವೆಂಕಟೇಶ್, ಅನಿತಾ ಬ್ರಾಗ್ಸ್, ನಂದಿನಿ ಶ್ರೀನಿವಾಸನ್ ಮತ್ತಿತರರು ಹಾಜರಿದ್ದರು.



ಮೈಸೂರಿನ ಧರ್ಮಸ್ಥಳ ಮಂಜುನಾಥೇಶ್ವರ ವ್ಯವಸ್ಥಾಪನೆ ಮತ್ತು ನಿರ್ವಹಣಾ ಮಹಾವಿದ್ಯಾಲಯ (ಎಸ್‌ಡಿಎಂಐಎಂಡಿ) ಮತ್ತು ರೋಟರಿ ಮಿಡ್‌ಟೌನ್ ಆಯೋಜಿಸಿದ್ದ ‘ಅಭಿವ್ಯಕ್ತಿ ಸ್ವಾತಂತ್ರ್ಯ’ ಕುರಿತ ವೈ. ಭಗವಾನ್ ಸ್ಮಾರಕ ಇಂಗ್ಲಿಷ್ ಚರ್ಚಾಸ್ಪರ್ಧೆ ಉದ್ಘಾಟನೆ ಕಾರ್ಯಕ್ರಮದಲ್ಲಿ ಪ್ರೊ.ಎನ್.ಆರ್. ಶರ್ಮಾ, ಆರ್.ವೆಂಕಟೇಶ್, ಛಾಯಾ ಶ್ರೀವತ್ಸ, ಅನಿತಾ, ನಂದಿನಿ ಶ್ರೀನಿವಾಸನ್ ಹಾಜರಿದ್ದರು